(೫) ಆರೋಗ್ಯ ಇಲಾಖೆಯ ಮತ್ತು ವಿದ್ಯಾ ಇಲಾಖೆಯ ನೌಕರರು ಹೊರದೇಶಗಳಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ

ಶ್ರೀ ಐ. ಬಿ. ಶಂಕರ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆ, ಹಾಗೂ ಆರೋಗ್ಯ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದು (೩೮೦-೪೦೦ ಜನ) ಅನಧಿಕೃತವಾಗಿ ವರ್ಷಾನುಗಟ್ಟಲೆ ಕೆಲಸಕ್ಕೆ ಗೈರು ಹಾಜರಾಗಿ ಹೊರ ದೇಶದಲ್ಲಿ ಆದರಲ್ಲೂ ಅರಬ್ ಕೊಲ್ಲಿ ರಾಷ್ಟ್ರಗಳಲ್ಲಿ ಹಣದ ಆಸೆಗಾಗಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಅಂತಹ ವೈದ್ಯರು, ಇತರ ನೌಕರರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ? ಇದರಿಂದಾಗಿ ಖಾಲಿ ಬಿದ್ದಿರುವ ಜಾಗಗಳಿಗೆ ಮಾಡಿರುವ ಪರ್ಯಾಯ ವ್ಯವಸ್ಥೆಗಳೇನು ? ಸರ್ಕಾರದ ಅನುಮತಿ ಇಲ್ಲದೇ ಹೋಗುವುದನ್ನು ತಡೆಯಲು ಏನಾದರೂ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲವೆ ? ಖಾಲಿ ಬಿದ್ದಿರುವ ಸ್ಥಳಗಳನ್ನು ನಿರುದ್ಯೋಗಿ ವೈದ್ಯರು ಮತ್ತು ಇತರ ನೌಕರರನ್ನು ತಾತ್ಕಾಲಿಕ ಆಧಾರದ ಮೇಲಾದರೂ ತುಂಬಲು ಸರ್ಕಾರಕ್ಕಿರುವ ಅಡ್ಡಿ ಏನು ? ಇಲ್ಲದಿದ್ದಲ್ಲಿ, ಸಾರ್ವಜನಿಕರಿಗೆ ಮತ್ತು ವೈದ್ಯ ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನಾನುಕೂಲ, ಚಿತ್ರಹಿಂಸೆಗಳಿಗೆ ನಾವು ಉದ್ದೇಶ ಪೂರ್ವಕ ಎಡೆ ಕೊಟ್ಟಂತಾಗುವುದಿಲ್ಲವೆ ಎನ್ನುವ ಅಂಶವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಟಿ. ಎಲ್. ತಿಮ್ಮೇಗೌಡ.—ಹೊರದೇಶಗಳಿಗೆ ಹೋಗಿರತಕ್ಕ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ, ಯಾವ ಯಾವ ವಿಷಯದಲ್ಲಿ ಎಷ್ಟೆಷ್ಟು ಜನ ಹೋಗಿದ್ದಾರೆನ್ನುವ ವಿವರಗಳನ್ನು ತರಿಸಿಕೊಂಡು, ಅವರಿಗೆ ನೋಟೀಸ್ ಕೊಟ್ಟು, ಕಾನೂನು ಪ್ರಕಾರ ಇಲಾಖೆ ಕ್ರಮ ತೆತೆದುಕೊಳ್ಳುತ್ತದೆನ್ನುವ ಭರವಸೆಯನ್ನು ಕೊಡುತ್ತೇನೆ.

(೬) ಬೆಳಗಾಂ ಸಿನಿಮಾ ಮಂದಿರದಲ್ಲಿ ಬಾಂಬ್ ಸ್ಫೋಟದ ಮತ್ತು ಜನರಲ್ಲಿ ಉಂಟಾದ ಭೀತಿ

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ತಾರೀಖು ೨೨-೧-೧೯೮೬ ರಂದು ಬೆಳಗಾವಿಯಲ್ಲಿ ಬಾಲಕೃಷ್ಣ ಸಿನಿಮಾ ಮಂದಿರದಲ್ಲಿ ನಡೆದಿರುವ ಬಾಂಬ್ ಸ್ಫೋಟದ ಬಗ್ಗೆ ಬೆಳಗಾವಿ ನಗರದ ಜನರಲ್ಲಿ ಭೀತಿಯ ವಾತಾವರಣ ಉಂಟಾಗಿದ್ದು ಬೆಳಗಾವಿ ನಗರದ ಸಿನಿಮಾ ಮಂದಿರಗಳಲ್ಲಿ ಜನರು ಎಚ್ಚರಿಕೆಯಿಂದ ಹೋಗಬೇಕಾಗಿದೆ. ನಗರದ ಇನ್ನುಳಿದ ಭಾಗದಲ್ಲಿ ಕೂಡ ಅಂತಹ ಘಟನೆ ಆಗುವುದು ಕಂಡು ಬರುತ್ತಿದ್ದು ಮುಂಬರುವ ದುರ್ಘಟನೆಯನ್ನು ತಡೆಹಿಡಿಯುವುದಲ್ಲಿ ಪೋಲೀಸ್ ಇಲಾಖೆ ಚುರುಕಾಗಬೇಕಾಗಿದ್ದು, ಈಗಾಗಲೇ ನಡೆದಿರುವ ಘಟನೆಯ ಹಿನ್ನೆಲೆಯಲ್ಲಿ ತಪ್ಪಿತಸ್ಥರನ್ನು ಕಂಡುಹಿಡಿಯಬೇಕಾಗಿದೆ. ಆದಕಾರಣ ನಡೆದಿರುವ ಘಟನೆಯ ಬಗ್ಗೆ ಸಂಪೂರ್ಣ ವಿವರವಾದಂತಹ ಮಾಹಿತಿಯನ್ನು ಸದನಕ್ಕೆ ನೀಡುವಂತೆ ಮಾನ್ಯ ಗೃಹ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಉತ್ತರ ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಶ್ರೀಮತಿ ಸುಮಾ ವಸಂತ, ಗೈರು ಹಾಜರಿ.

(೭) ಜೋಗಿ ಹಳ್ಳಿಯ ಹತ್ತಿರ ಸೇತುವೆ ನಿರ್ಮಾಣ

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿ ಟೌನನ್ನು ಜೋಗಿಹಳ್ಳಿ, ಹೊನ್ನೆಬಾಗಿ, ಬುಳ್ಳೇನಹಳ್ಳಿ ಮತ್ತು ಕೊಂಡ್ಲಿ ಗ್ರಾಮಗಳ ಮೂಲಕ ತುಮಕೂರು ರಸ್ತೆಗೆ ಸೇರಿಸುವ ಒಂದು ಮುಖ್ಯ ರಸ್ತೆ ಇದೆ. ಈ ರಸ್ತೆ ಚಿಕ್ಕನಾಯಕನಹಳ್ಳಿ ಕೆರೆಗೆ ಸೇರುವ ಜೋಗಿಹಳ್ಳಿ ಹಳ್ಳ ದಾಟಿ ಹೋಗಬೇಕಾಗುತ್ತದೆ. ಮಳೆಗಾಲದಲ್ಲಿ ಈ ಹಳ್ಳದಲ್ಲಿ ಸದಾ ನೀರು ಐದು ಅಡಿ ಆರು ಅಡಿ ನಿಂತಿರುತ್ತದೆ. ತುಂಬಿ ಬಂದಾಗ ಈ ಹಳ್ಳವನ್ನು ಏನೇ ಕಾರಣಕ್ಕೂ ದಾಟಲು ಸಾಧ್ಯವಿಲ್ಲ. ಆದ್ದರಿಂದ ಈ ಹಳ್ಳವನ್ನು ದಾಟಲು ಈ ಹಳ್ಳಕ್ಕೆ ಜೋಗಿಹಳ್ಳಿ ಹತ್ತಿರ ಒಂದು ತಾತ್ಕಾಲಿಕ ಸೇತುವೆ ಮಾಡಲಾಗಿತ್ತು. ಇದು ಮುರಿದು ಬಿದ್ದು ಇಲ್ಲಿಗೆ ಒಂದು ವರ್ಷವಾಯಿತು. ಈ ರಸ್ತೆಯಲ್ಲಿ ಓಡಾಡುವ ಈ ಭಾಗದ ಜನರಿಗೆ, ಜಾನುವಾರುಗಳಿಗೆ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಮುರಿದು ಬಿದ್ದಿರುವ ಈ ಸೇತುವೆಯನ್ನು ನಿರ್ಮಾಣ ಮಾಡಿಸಿಕೊಡಬೇಕೆಂದು ಸರ್ಕಾರವನ್ನು ಕೋರಲಾಗಿದೆ. ಶಾಶ್ವತವಾಗಿ ಸೇತುವೆ ನಿರ್ಮಾಣ ಮಾಡುವವರೆಗೆ ತಾತ್ಕಾಲಿಕವಾಗಿಯಾದರೂ ಒಂದು ಸೇತುವೆಯನ್ನು ಮಾಡಿ ಈ ಹಳ್ಳ ದಾಟುವ ಜನ, ಜಾನುವಾರುಗಳು ಹಾಗೂ ವಿದ್ಯಾರ್ಥಿಗಳು ಮತ್ತು ಗಣಿ ಕಾರ್ಮಿಕರಿಗೆ ಸಹಾಯ ಮಾಡಿಕೊಡಬೇಕಾಗಿ ಈ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಕಾಮಗಾರಿ ಮಂತ್ರಿಯವರು ಸದನದಲ್ಲಿ ಇಲ್ಲ, ಅವರಿಗೆ ವಿಷಯ ತಿಳಿಸಿ, ಇದರ ಬಗ್ಗೆ ಸೂಕ್ತ ಉತ್ತರ ಕೊಡುವುದಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

(೮) ಮಲಪ್ರಭಾ ನದಿದಂಡೆಯಲ್ಲಿ ಪಂಪ್‌ಸೆಟ್ ಹಾಕುವುದಕ್ಕೆ ಪರವಾನಿಗೆ

ಶ್ರೀ ಎಸ್. ಜೆ. ನಂಜಯ್ಯನಮಠ್.—ಮಾನ್ಯ ಅಧ್ಯಕ್ಷರೇ, ಮಲಪ್ರಭಾ ನದಿ ದಂಡೆಯಲ್ಲಿ ಬರುವಂತಹ ಜೊಳಚಗುಡ್ಡ ಗ್ರಾಮದಿಂದ ಕೆಳಗೆ ರಾಮಧಳ ಗ್ರಾಮದವರೆಗೆ ಎಷ್ಟು ಭಾರಿ ಪಂಪುಸೆಟ್ ಕೂಡ್ರಿಸುವ ಪರ್ಮಿಷನ್ ಸಲುವಾಗಿ ರೈತರು ವಿನಂತಿಸಿದರೂ ಮಾನ್ಯತೆ ಮಾಡುತ್ತಿಲ್ಲ. ಖುದ್ದಾಗಿ ಹೋಗಿ ಬೆಳಗಾವಿಯ ಚೀಫ್ ಇಂಜಿನಿಯರ್‌ರವರಿಗೆ ವಿಷಯ ತಿಳಿಸಿ ಬಂದರೂ ಇನ್ನೂ ಕ್ರಮ ಕೈಗೊಂಡಿರುವುದಿಲ್ಲ. ಇದರಿಂದ ಸಾಲ ಪಡೆದು ಪೈಪ್‌ಲೈನ್ ಹಾಕುವಂತಹ ರೈತರಿಗೆ ತೀವ್ರ ತೊಂದರೆಯಾಗಿದೆ. ಆದ್ದರಿಂದ ಪಂಪ್‌ಸೆಟ್ ಕೂಡ್ರಿಸುವ ಪರ್ಮಿಷನ್ ಕೊಡಲು ಆದೇಶ ನೀಡಬೇಕು. ಜೂನ್ ೧೫ರ ನಂತರ ನೀರು ಬಳಕೆ ಕಂಡೀಷನ್ ಹಾಕಿ ಕೊಡಲಿ ಈ ಬಗ್ಗೆ ತೀವ್ರವೇ ಕ್ರಮ ಕೈಗೊಳ್ಳುವರೆ ಎಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರೈತರಿಗೆ ಪಂಪುಸೆಟ್ಟು ಹಾಕುವುದಕ್ಕೆ ಪರ್ಮಿಷನ್ ಕೊಟ್ಟರೆ, ಕುಡಿಯುವ ನೀರಿಗೆ ತೊಂದರೆಯಾಗುತ್ತದೆ.

(೯) ತುಮಕೂರು ಕೋರ್ಟ್ ಮುಂಭಾಗದಲ್ಲಿರುವ ನೀರಿನ ಟ್ಯಾಂಕಿನಲ್ಲಿ ಸೋರುವಿಕೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ತುಮಕೂರು ನಗರದ ಕೋರ್ಟ್ ಮುಂಭಾಗದಲ್ಲಿ ಜಲ ಮಂಡಲಿಯವರು ಕಟ್ಟಿರುವ ನೀರಿನ ಟ್ಯಾಂಕಿಗೆ ನಿನ್ನೆ ಮೊದಲ ಬಾರಿಗೆ ನೀರನ್ನು ತುಂಬಿದಾಗ ೨ ಅಡಿ ಸಹ ನೀರು ತುಂಬದೆ ಓವರ್‌ಹೆಡ್ ಟ್ಯಾಂಕಿನ ಸುತ್ತ ನೀರು ಸೋರಲು ಪ್ರಾರಂಭವಾಗಿ ಆ ಟ್ಯಾಂಕ್‌ನ್ನು ಕಟ್ಟಿರುವ ಕಳಪೆ ಕೆಲಸ ನೋಡಿ ಸಾರ್ವಜನಿಕರು ಆಶ್ಚರ್ಯ ವ್ಯಕ್ತಪಡಿಸಿ ಸ್ಥಳದಲ್ಲಿ ಫೋಟೋ ಸಹ ತೆಗೆಸಿದ್ದಾರೆ. ದಿನಾಂಕ ೨೩-೧-೧೯೮೬ರ ತುಮಕೂರು ಟೈಮ್ಸ್ ಪತ್ರಿಕೆಯಲ್ಲಿ ಸಹ ಈ ವಿಷಯ ಬಂದಿದೆ. ಇಂತಹ ಭೀಕರ ಬರಗಾಲದಲ್ಲಿ ಪಕ್ಕದಲ್ಲಿರುವ ಪೈಪ್ ಹಾಳಾಗಿ ನೀರು ಸೋರಿ ಹೋಗುತ್ತಿರುವುದು ೧೯೮೫ರಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕಟ್ಟಿದ ಕಳಪೆ ಟ್ಯಾಂಕ್ ನಿರ್ಮಾಣಕ್ಕೆ ಕಾರಣಕರ್ತರಾದ ಅಧಿಕಾರಿಗಳ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಸರ್ಕಾರವನ್ನು ಕೇಳ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ನಾನು ೧೦ನೇ ತಾರೀಖು ತುಮಕೂರು ನಗರದಲ್ಲಿದೆ. ಜಲಮಂಡಲಿಯವರು ನಿರ್ಮಿಸಿರುವ ಜಲಸಂಗ್ರಹದಿಂದ ೨೦೦-೩೦೦ ಅಡಿ ದೂರದಲ್ಲಿ ಕೂತಿದ್ದೆ. ಇದರ ಬಗ್ಗೆ ಪುರಸಭೆಯ ಅಧ್ಯಕ್ಷರಾಗಲೀ, ಶಾಸಕರಾಗಲೀ ನನಗೆ ತಿಳಿಸಲಿಲ್ಲ. ಹೊಸದಾಗಿ ಕಟ್ಟಿದಾಗ ನೀರು ಸೋರುತ್ತದೆಂದು ಹೇಳಿದ್ದಾರೆ. ಆದರೂ ಕೂಡ ನೀರು ಪೋಲಾಗಬಾರದು. ಜಲ ಸಂಗ್ರಹದಲ್ಲಿ ಎಲ್ಲೆಲ್ಲಿ ಸೋರುತ್ತದೆ ಅದನ್ನು ಕೂಡಲೇ ಸರಿಪಡಿಸಲಿಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ತಿಳಿಸುತ್ತೇನೆ.

ಮಂತ್ರಿಯವರ ಹೇಳಿಕೆ

(1) ರಾಣೆಬೆನ್ನೂರಿನ ನೀರಿನ ಟ್ಯಾಂಕ್ ಸ್ವಚ್ಛಗೊಳಿಸುವ ಬಗ್ಗೆ

೧೧-೦೦ ಎ. ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಾದ ಕೋಳಿವಾಡ್‌ರವರು ನಿಯಮ ೫೩ರ ಪ್ರಕಾರ ಪ್ರಸ್ತಾಪಿಸಿದಂತಹ ವಿಚಾರದ ಬಗ್ಗೆ ಮಾನ್ಯ ಪಂಚಾಯತ್ ರಾಜ್ ಸಚಿವರು ಈಗ ಉತ್ತರ ಹೇಳುತ್ತಾರೆ.

ಅಧ್ಯಕ್ಷರು.—ಮಾನ್ಯ ಪಂಚಾಯತಿ ರಾಜ್ ರಾಜ್ಯ ಸಚಿವರು ಆದರು ಏನು ಹೇಳಿ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಸದಸ್ಯರಾದ ಕೋಳಿವಾಡ್‌ರವರು ವಾಟರ್‌ಟ್ಯಾಂಕ್‌ನ ಬಗ್ಗೆ ಪ್ರಸ್ತಾವ ಮಾಡಿದ್ದಾರೆ, ಟ್ಯಾಂಕ್‌ನ ಟಿಟ್‌ಲೆಟ್ ಮತ್ತು ಟ್ಯಾಂಕ್ ಸ್ವಚ್ಛ ಮಾಡಿಲ್ಲವೆಂದು ತಿಳಿಸಿದ್ದಾರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಅಧಿಕಾರಿಗಳಿಗೆ ಹೇಳಿದ್ದೇನೆ.